JUNE 13, 2025

# AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಪ್ರಸಾರ ಭಾರತಿ, ಆಕಾಶವಾಣಿ**

**ಧಾರವಾಡ**

**ಪ್ರದೇಶ ಸಮಾಚಾರ**

<><><>

- **ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ, ರಾಜ್ಯದಲ್ಲಿ ಯಶಸ್ವಿ ಸಂಪನ್ನ.**
- **ಕಿರು ಆಹಾರ ಸಂಸ್ಕರಣಾ ಘಟಕಗಳಿಗೆ, 15 ಲಕ್ಷ ರೂಪಾಯಿ ಸಹಾಯ ಧನ.**
- **ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ; ವಿವಿಧೆಡೆ ಜನ ಜಾಗ್ರತಿ ಜಾಥಾ.**
- **ಹುಬ್ಬಳ್ಳಿಯ, ಕರ್ನಾಟಕ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ, ಇಂದಿನಿಂದ 'ಕಾಪಿಕಾನ್ ಸಮ್ಮೇಳನ.'**
- **ರಾಜ್ಯಾದ್ಯಂತ, ಮಳೆ ಆರ್ಭಟ, ಮುಂದುವರಿಕೆ; ಜನಜೀವನ ಅಸ್ತವ್ಯಸ್ತ.**

<><><>

**ಈಗ ವಾರ್ತೆಗಳ ವಿವರ**

<><><>

**ಗುಜರಾತ ರಾಜ್ಯದ ಅಹಮದಾಬಾದ್‌ನಲ್ಲಿ ಸಂಭವಿಸಿದ, ಏರ್ ಇಂಡಿಯಾ ಎ 1-171 ವಿಮಾನ ದುರಂತದಲ್ಲಿ, 230 ಜನ ಪ್ರಯಾಣಿಕರು, 12 ಜನ ಸಿಬ್ಬಂದಿಗಳಿದ್ದರು. 200ಕ್ಕೂ ಹೆಚ್ಚು ಜನ ಮೃತಪಟ್ಟಿರುವ ಶಂಕೆ ವ್ಯಕ್ತವಾಗಿದೆ. ಕರ್ನಾಟಕದ ಮಂಗಳೂರು ಮೂಲದ, ಮುಂಬೈ ನಿವಾಸಿ ಕ್ಲೈವ್ ಕುಂದರ್, ವಿಮಾನದ ಸಹ ಪೈಲಟ್ ಆಗಿದ್ದು, ಅವರು ಸಹ ಮೃತಪಟ್ಟಿದ್ದಾರೆ. ಬಿ.ಜೆ. ವೈದ್ಯಕೀಯ ಮಹಾವಿದ್ಯಾಲಯದ ಹಾಸ್ಟೆಲ್‌ಗೆ ಪತನಗೊಂಡ ವಿಮಾನ ಅಪ್ಪಳಿಸಿದ ಹಿನ್ನೆಲೆ, 24 ಜನ ವೈದ್ಯಕೀಯ ವಿದ್ಯಾರ್ಥಿಗಳು ಮೃತಪಟ್ಟು, ಹಲವರು ಗಾಯಗೊಂಡಿದ್ದಾರೆ ಎಂದು, ಪ್ರಾಥಮಿಕ ವರದಿ ತಿಳಿಸಿದೆ. ಭಾರತೀಯ ಮೂಲದ, ಬ್ರಿಟನ್ ಪ್ರಜೆ ರಮೇಶ, ವಿಮಾನ ದುರ್ಘಟನೆಯಲ್ಲಿ ಬದುಕುಳಿದಿದ್ದಾರೆ. ರಕ್ಷಣೆ ಹಾಗೂ ತೆರವು ಕಾರ್ಯಾಚರಣೆ ಮುಂದುವರೆದಿದೆ.**

<><><>

**ಕಳೆದ ಮೇ 29 ರಂದು, ರಾಜ್ಯಾದ್ಯಂತ ಪ್ರಾರಂಭವಾದ, ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ, 15 ದಿನಗಳ ಬಳಿಕೆ, ನಿನ್ನೆಗೆ ಮುಕ್ತಾಯಗೊಂಡಿತು.**

<><><>

ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ, ಗದಗ ಜಿಲ್ಲೆಯಲ್ಲಿ ಯಶಸ್ವಿಯಾಗಿ ಜರುಗಿತು ಎಂದು, ಹುಲಕೋಟಿಯ ಕೆ.ಎಚ್.ಪಾಟೀಲ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ, ಸುಧಾ ಮಂಕಣಿ ತಿಳಿಸಿದ್ದಾರೆ.

<><><>

ಸುಧಾ ಮಂಕಣಿ ಧ್ವನಿ 45 ಸೆಕೆಂದುಗಳು

<><><>

ಕಿರು ಆಹಾರ ಸಂಸ್ಕರಣಾ ಘಟಕಗಳಿಗೆ, 15 ಲಕ್ಷ ರೂಪಾಯಿ ಸಹಾಯ ಧನ ನೀಡಲಾಗುತ್ತಿದೆ. ಇಡೀ ದೇಶದಲ್ಲಿಯೇ ಇದು ಮಾದರಿ ಮತ್ತು ಏಕೈಕ ಯೋಜನೆಯಾಗಿದೆ ಎಂದು, ಕೃಷಿ ಖಾತೆ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ. ಬೆಂಗಳೂರಿನ ಟೌನ್ ಹಾಲ್‌ನಲ್ಲಿ, ಕೃಷಿ ಜಾಗೃತಿ ಕಾರ್ಯಾಗಾರ ಉದ್ಘಾಟಿಸಿ, ಅವರು ಮಾತನಾಡಿದರು. ಕಿರು ಸಂಸ್ಕರಣಾ ಘಟಕಗಳಿಗೆ, ಕೇಂದ್ರ ಸರ್ಕಾರ 6 ಲಕ್ಷ ರೂಪಾಯಿ ಹಾಗೂ ರಾಜ್ಯ ಸರ್ಕಾರ 9 ಲಕ್ಷ ರೂಪಾಯಿಗಳ ಸಹಾಯ ಧನ ನೀಡುತ್ತಿದೆ. ರಾಜ್ಯದಲ್ಲಿ ಸಾವಿರದ 400 ಆಹಾರ ಸಂಸ್ಕರಣಾ ಘಟಕಗಳಿವೆ. 206 ಕೋಟಿ ರೂಪಾಯಿ, ವಿಶೇ ’ ಅನುದಾನ ಮೀಸಲಿದೆ ಎಂದರು. ರಾಜ್ಯದ ಕೃಷಿ, ತೋಟಗಾರಿಕೆ ವಿಶ್ವವಿದ್ಯಾಲಯಗಳು ಹಾಗೂ ಸರ್ಕಾರಿ ಸಂಸ್ಥೆಗಳಲ್ಲಿ, 14 ಸಾಮಾನ್ಯ ಇನ್‌ಕ್ಯುಬೇಷನ್ ಸೆಂಟರ್‌ಗಳಿಗೆ, ಮಂಜೂರಾತಿ ನೀಡಲಾಗಿದೆ ಎಂದು, ಸಚಿವರು ತಿಳಿಸಿದರು.

<><><>

ರಾಷ್ಟ್ರಪತಿಗಳಿಂದ ಗೌರವಿಸಲ್ಪಟ್ಟ, ದಾವಣಗೆರೆ ಜಿಲ್ಲೆ, ಹರಿಹರ ತಾಲೂಕು, ಕುಂಬಳೂರಿನ ಆಂಜನೇಯ, 200 ಕ್ಕೂ ಅಧಿಕ ದೇಸಿ ಭತ್ತದ ತಳಿಗಳನ್ನು ಸಂರಕ್ಷಣೆ ಮಾಡಿದ್ದಾರೆ; ಭತ್ತದ ಬೀಜ ಬ್ಯಾಂಕ್ ಆರಂಭಿಸಿದ್ದಾರೆ. ರೈತ ವಿಜ್ಞಾನಿ ಆಂಜನೇಯ ಅಭಿವೃದ್ಧಿ ಪಡಿಸಿದ 'ಸಿಂಧೂರ ಮಧುಸಾಲೆ' ಮತ್ತು 'ಅಂದನೂರು ಸಣ್ಣ' ಭತ್ತದ ತಳಿಗಳಿಗೆ, ಹೊಸ ದಿಲ್ಲಿಯ ಸಸ್ಯ ತಳಿ ಸಂರಕ್ಷಣೆ ಮತ್ತು ರೈತರ ಹಕ್ಕುಗಳ ಪ್ರಾಧಿಕಾರ, 'ರೈತರ ತಳಿ' ಎಂದು ನೊಂದಾಯಿಸಿಕೊಂಡು, ಹಕ್ಕುಸ್ವಾಮ್ಯ 'ಪೇಟೆಂಟ್' ನೀಡಿದೆ. ಪ್ರದೇಶ ಸಮಾಚಾರಕ್ಕಾಗಿ, ಆಂಜನೇಯ ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.

<><><>

ರೈತ ವಿಜ್ಞಾನಿ ಆಂಜನೇಯ ಧ್ವನಿ 48 ಸೆಕೆಂದುಗಳು

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ **@airnews_dharwad** ಹಾಗೂ

ನಮ್ಮ ಫೇಸ್ಬುಕ್ ಖಾತೆ **Airrnu Dharwad** ಅನುಸರಿಸಿ.

<><><>

2001 ರಲ್ಲಿ, ರಾಜ್ಯ ಸರ್ಕಾರ, ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ, ದೇಶದಲ್ಲಿಯೇ ಪ್ರಥಮ ಬಾರಿಗೆ, "ಬಾಲ ಕಾರ್ಮಿಕ ಕ್ರಿಯಾ ಯೋಜನೆ" ಜಾರಿಗೆ ತಂದಿದೆ ಎಂದು, ಕಾರ್ಮಿಕ ಖಾತೆ ಸಚಿವ ಸಂತೋಷ ಲಾಡ, ತಿಳಿಸಿದ್ದಾರೆ. ಬೆಂಗಳೂರಿನ, ಮಹಾತ್ಮ ಗಾಂಧಿ ರಸ್ತೆಯ, ಬಾಲ ಕಾರ್ಮಿಕ ಯೋಜನಾ ಸೊಸಾಯಿಟಿಯಲ್ಲಿ, ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನಾಚರಣೆಯಲ್ಲಿ ಪಾಲ್ಗೊಂಡು, ಗಾಂಧೀಜಿ ಪುತ್ಥಳಿಗೆ ಗೌರವಾರ್ಪಿಸಿ ಅವರು ಮಾತನಾಡಿದರು. ಬಾಲ ಹಾಗೂ ಕಿಶೋರ ಕಾರ್ಮಿಕರನ್ನು ಪತ್ತೆ ಹಚ್ಚಿ, ಪುನರ್ವಸತಿ ಕಲ್ಪಿಸಲು, ಕಾರ್ಮಿಕ ಇಲಾಖೆ ನೇತೃತ್ವದಲ್ಲಿ, 11 ಇಲಾಖೆಗಳ ಸಮನ್ವಯದೊಂದಿಗೆ, ರಾಜ್ಯದ 22 ಜಿಲ್ಲೆಗಳಲ್ಲಿ, ತುರ್ತು ಕಾರ್ಯಪಡೆ ರಚಿಸಲಾಗಿದೆ. ದಾಳಿ ವೇಳೆ ಸಿಕ್ಕ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯ ದೊರಕಿಸಿ, ಪುನರ್ವಸತಿ ಕಲ್ಪಿಸಲಾಗಿದೆ ಎಂದರು.

<><><>

'ಪ್ರಗತಿ ಸ್ಪ ಷ್ಟವಾಗಿದೆ, ಆದರೆ ಇನ್ನೂ ಹೆಚ್ಚು ಸಾಧಿಸಬೇಕಿದೆ; ನಮ್ಮ ಪ್ರಯತ್ನಗಳ ವೇಗ ವರ್ಧಿಸೋಣ' ಎಂಬ ಧ್ಯೇಯದೊಂದಿಗೆ, ಅಂತಾರಾಷ್ಟ್ರೀಯ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನವನ್ನು, ಆಚರಿಸಲಾಯಿತು.

<><><>

ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆ, ಕಾರ್ಮಿಕ ಇಲಾಖೆ ಸಹಯೋಗದಲ್ಲಿ, ರಾಜ್ಯದ ಹಲವೆಡೆ, ಜನ ಜಾಗ್ರತಿ ಜಾಥಾ, ಬೈಕ್ ರ್‍ಯಾಲಿಗಳನ್ನು ಆಯೋಜಿಸಿ, 14 ವರ್ಷದೊಳಗಿನ ಬಾಲ ಹಾಗೂ 18 ವರ್ಷದೊಳಗಿನ ಕಿಶೋರ ಕಾರ್ಮಿಕರನ್ನು, ದುಡಿತದಲ್ಲಿ ತೊಡಗಿಸುವುದನ್ನು ನಿಷೇಧಿಸಿರುವ ಕುರಿತು, ಸಾರ್ವಜನಿಕರಿಗೆ ಮಾಹಿತಿ ನೀಡಲಾಯಿತು.

<><><>

ಬಾಲ ಹಾಗೂ ಕಿಶೋರ ಕಾರ್ಮಿಕ ಪದ್ಧತಿ ನಿಷೇಧದ ಕುರಿತು, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ, ಧಾರವಾಡ ಜಿಲ್ಲೆ ಕಾರ್ಮಿಕ ಅಧಿಕಾರಿ, ಅಕ್ಬರ್ ಮುಲ್ಲಾ.

<><><>

ಕಾರ್ಮಿಕ ಅಧಿಕಾರಿ ಅಕ್ಬರ್ ಮುಲ್ಲಾ ಧ್ವನಿ 45 ಸೆಕೆಂದುಗಳು

<><><>

"ಮನಸ್ಸುಗಳನ್ನು ಒಗ್ಗೂಡಿಸುವುದು, ಮುಂದುವರಿದ ಆರೈಕೆ", ಧ್ಯೇಯದೊಂದಿಗೆ, ಇಂದಿನಿಂದ ಮೂರು ದಿನಗಳ, 42ನೇ 'ಕಾಪಿಕಾನ್ 2025' ಸಮ್ಮೇಳನ, ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯ ಸಭಾಂಗಣದಲ್ಲಿ ಜರುಗಲಿದೆ ಎಂದು, 'ಕಾಪಿಕಾನ್' ಆಯೋಜನಾ ಸಮಿತಿ ಅಧ್ಯಕ್ಷ ಡಾಕ್ಟರ್ ಈಶ್ವರ ಹಸಬಿ, ತಿಳಿಸಿದ್ದಾರೆ. ತೆಲಂಗಾಣ, ಆಂಧ್ರ ಪ್ರದೇಶ, ತಮಿಳುನಾಡು, ಕೇರಳ, ಮಹಾರಾಷ್ಟ್ರ ಸೇರಿದಂತೆ, ದೇಶದ ವಿವಿಧ ರಾಜ್ಯಗಳ, ವೈದ್ಯರು, ಸ್ನಾತಕೋತ್ತರ ವಿದ್ಯಾರ್ಥಿಗಳು, ಸಂಶೋಧಕರು, ಆರೋಗ್ಯ ಸೇವಾ ವೃತ್ತಿಪರರು ಸೇರಿದಂತೆ, ಸಾವಿರದ 800 ಕ್ಕೂ ಹೆಚ್ಚು ಜನ, ಪಾಲ್ಗೊಳ್ಳುವ ನಿರೀಕ್ಷೆಯಿದೆ ಎಂದು, ಡಾಕ್ಟರ್ ಹಸಬಿ ಹೇಳಿದರು. ಇಂದು ಸಂಜೆ 6 ಗಂಟೆಗೆ, ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ, ಡಾಕ್ಟರ್ ಜ್ಯೋತಿರ್ಮಯ್ ಪಾಲ್ ಹಾಗೂ ಡಾಕ್ಟರ್ ನರಸಿಂಹಲು, ಉದ್ಘಾಟಿಸಲಿದ್ದಾರೆ. ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಧಾರವಾಡದ ಎಸ್.ಡಿ.ಎಂ. ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಹುಬ್ಬಳ್ಳಿಯ ಕೆ.ಎಲ್.ಇ. ಸಂಸ್ಥೆಗಳ ಸಹಯೋಗದಲ್ಲಿ, ಸಮ್ಮೇಳನ ಜರುಗಲಿದೆ.

<><><>

ಉತ್ತರಕನ್ನಡ ಜಿಲ್ಲೆಯ, ಕಾರವಾರ, ಅಂಕೋಲಾ, ಕುಮಟಾ ಹಾಗೂ ಭಟ್ಕಳ ತಾಲೂಕುಗಳಲ್ಲಿ, ಭರದಿಂದ ಮೃಗಶಿರಾ ಮಳೆ, ಮುಳುಗಿಸುವಂತೆ ಸುರಿಯುತ್ತಿದೆ. ಕಾರವಾರದಲ್ಲಿ 37 ಸೆಂಟಿ ಮೀಟರ್ ಮಳೆ ದಾಖಲಾಗಿದೆ. ಶಾಲೆ, ಕಾಲೇಜಿಗೆ ರಜೆ ಪ್ರಕಟಿಸಲಾಗಿದೆ.

<><><>

ಭಟ್ಕಳದಲ್ಲಿ, ಗುಡ್ಡದಂಚಿನ ಮನೆಗಳು ಹಾಗೂ ನದಿ ಪಾತ್ರದ ಜನ, ಎಚ್ಚರಿಕೆ ವಹಿಸುವಂತೆ, ಮೀನುಗಾರರು ಕಡಲಿಗೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ.

<><><>

ಚಿಕ್ಕಮಗಳೂರು ಜಿಲ್ಲೆಗೆ ಇಂದು ಮತ್ತು ನಾಳೆ, ರೆಡ್ ಅಲರ್ಟ್ ಘೋಷಿಸಲಾಗಿದೆ. ಅಂಗನವಾಡಿ ಕೇಂದ್ರಗಳಿಗೆ ರಜೆ ಪ್ರಕಟಿಸಲಾಗಿದೆ.

<><><>

ಕೊಡಗು ಜಿಲ್ಲೆಯಾದ್ಯಂತ ಶಾಲೆ, ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ. ಪಿಯೂಸಿ ಪರೀಕ್ಷೆ –3 ಪೂರ್ವ ನಿಗದಿಯಂತೆ ನಡೆಯಲಿದೆ ಎಂದು, ಜಿಲ್ಲಾಧಿಕಾರಿ ತಿಳಿಸಿದ್ದಾರೆ.

<><><>

ಧಾರವಾಡ ಜಿಲ್ಲೆ, ನವಲಗುಂದ ಹಾಗೂ ಹುಬ್ಬಳ್ಳಿ ತಾಲೂಕು ವ್ಯಾಪ್ತಿಯ, ಬೆಣ್ಣಿಹಳ್ಳ ಹಾಗೂ ತುಪ್ಪರಿಹಳ್ಳ ಪಾತ್ರದ ಜನರು, ಮುಂಜಾಗ್ರತೆ ವಹಿಸುವಂತೆ, ಜಿಲ್ಲಾಧಿಕಾರಿ ದಿವ್ಯಾ ಪ್ರಭು, ಸೂಚಿಸಿದ್ದಾರೆ. ಇಂದು, ಶಾಲೆ, ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ.

<><><>

ಕುಂದಗೋಳದಲ್ಲಿ ಓರ್ವ ವ್ಯಕ್ತಿ ಮೃತಪಟ್ಟಿದ್ದು, ಹುಬ್ಬಳ್ಳಿಯಲ್ಲಿ ಓರ್ವ ವ್ಯಕ್ತಿ ಕಾಣೆಯಾಗಿದ್ದಾರೆ. ಸಮರೋಪಾದಿಯಲ್ಲಿ ಪರಿಹಾರ ಕಾರ್ಯಾಚರಣೆ ಮುಂದುವರೆದಿದೆ. ಇಂದು ಆರೇಂಜ್ ಅಲರ್ಟ್ ಪ್ರಕಟಿಸಲಾಗಿದೆ.

<><><>

ಗದಗ ಜಿಲ್ಲೆ, ರೋಣ ತಾಲೂಕು, ಯಾವಗಲ್ ಗ್ರಾಮದ ಬಳಿ, ಬೆಣ್ಣೆ ಹಳ್ಳ ಅಪಾಯದ ಮಟ್ಟದಲ್ಲಿ ಹರಿಯುತ್ತಿದೆ. ಈರುಳ್ಳಿ, ಶೇಂಗಾ, ಹೆಸರು ಮತ್ತು ಮೆಣಸಿನಕಾಯಿ ಬೆಳೆಗಳು ಜಲಾವೃತ ಗೊಂಡಿವೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು

<><><>

- ವಿಕಸಿತ ಕೃಷಿ ಸಂಕಲ್ಪ ರಾಷ್ಟ್ರೀಯ ಅಭಿಯಾನ, ರಾಜ್ಯದಲ್ಲಿ ಯಶಸ್ವಿ ಸಂಪನ್ನ.
- ಕಿರು ಆಹಾರ ಸಂಸ್ಕರಣಾ ಘಟಕಗಳಿಗೆ, 15 ಲಕ್ಷ ರೂಪಾಯಿ ಸಹಾಯ ಧನ.
- ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ; ವಿವಿಧೆಡೆ ಜನ ಜಾಗ್ರತಿ ಜಾಥಾ.

- **ಹುಬ್ಬಳ್ಳಿಯ, ಕರ್ನಾಟಕ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ, ಇಂದಿನಿಂದ 'ಕಾಪಿಕಾನ್ ಸಮ್ಮೇಳನ.'**
- **ರಾಜ್ಯಾದ್ಯಂತ, ಮಳೆ ಆರ್ಭಟ, ಮುಂದುವರಿಕೆ; ಜನಜೀವನ ಅಸ್ತವ್ಯಸ್ತ.**

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>